# ಚಿಕ್ಕ ಹುಡುಗಿ ತೋರಿದ ಶ್ರೀಮಾತೆಯ ಆದರ್ಶ


ಸ್ವಾಮಿ ವಿಮೋಕ್ಷಾನಂದ

ಸಂಗ್ರಹ : ಸ್ವರ್ಣಗೌರಿ



ಆಧಾರ: 'ಸಂವಿತ್' ಇಂಗ್ಲಿಷ್ ಪತ್ರಿಕೆ


ಇದೊಂದು ರೋಮಾಂಚಕಾರಿ ಘಟನೆ. ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜಯಂತಿ ಮಹೋತ್ಸವದ ಸಂದರ್ಭ. ರಾಂಚಿ ನಗರದಲ್ಲಿ ರಾಮಕೃಷ್ಣ ಮಿಷನ್ ನಡೆಸುತ್ತಿರುವ ಕ್ಷಯರೋಗ ನಿವಾರಣಾ ಆಸ್ಪತ್ರೆಯೊಂದಿದೆ. ಅದು ಬುಡಕಟ್ಟು ಜನಾಂಗಗಳಿರುವ ಹಳ್ಳಿಗಳಿಂದ ಸುತ್ತುವರಿದಿದೆ. ಅವುಗಳಲ್ಲಿ ಒರಾನ್ ಮತ್ತು ಮುಂಡ ಬುಡಕಟ್ಟುಗಳು ಮುಖ್ಯವಾದುವು. ಈ ಹಳ್ಳಿಗಳಿಗೆ ಭೇಟಿ ನೀಡಿದಾಗ, ಅವರು ವಿವರಿಸಿ ಹೇಳುತ್ತಿದ್ದ ಸ್ವಂತ ಜೀವನವೃತ್ತಾಂತ ನಮ್ಮನ್ನು ಆಶ್ಚರ್ಯಗೊಳಿಸುತ್ತಿತ್ತು.

ಒಮ್ಮೆ ಒಂದು ದೊಡ್ಡ ಮೆರವಣಿಗೆ ಆಯೋಜಿತವಾಗಿತ್ತು. ಆರು ಹಳ್ಳಿಗಳ ಜನ ಇದರಲ್ಲಿ ಭಾಗವಹಿಸಲು ಒಪ್ಪಿದ್ದರು. ಬೆಳಗ್ಗೆಯೇ ಹೊರಟು ಹನ್ನೊಂದು ಗಂಟೆಯ ಹೊತ್ತಿಗೆ ಆಶ್ರಮ ತಲುಪುವುದೆಂದು ಆಯೋಜಿಸಲಾಗಿತ್ತು. ಪ್ರತಿಯೊಂದು ಹಳ್ಳಿಯವರೂ ತಮ್ಮದೇ ಆದ ಒಂದು ಸ್ತಬ್ಧಚಿತ್ರವನ್ನು ಇದಕ್ಕೆಂದು ವಿಶೇಷವಾಗಿ ತಯಾರಿಗೊಳಿಸಿದ್ದರು.

ಆ ಹಳ್ಳಿಗಳಲ್ಲಿ ತುಪುದಾನ ಎಂಬ ಹಳ್ಳಿಯೂ ಒಂದು. ಅಲ್ಲಿಂದ ಮೆರವಣಿಗೆ ಒಂದು ಕಿಲೋಮೀಟರ್ ಕ್ರಮಿಸಿ, ಆಶ್ರಮ ತಲುಪಿತು. ಡುಂಗ್ರಿ ಎಂಬ ಹಳ್ಳಿಯಿಂದ ಬಂದ ಒಂದು ಸ್ತಬ್ಧಚಿತ್ರದಲ್ಲಿ, ಶ್ರೀಮಾತೆಯವರಂತೆ ಬಿಳಿಯ ಸೀರೆಯುಟ್ಟು, ಭುಜದಿಂದ ಹರಿಯಬಿಟ್ಟ ನೀಳವಾದ ಕಪ್ಪು ಕೇಶರಾಶಿಯುಳ್ಳ ಪುಟ್ಟ ಬಾಲಕಿಯು ವಿಶೇಷವಾಗಿ ಎಲ್ಲರ ಗಮನವನ್ನು ಸೆಳೆದಳು. ಅವಳು ಒಂದು ತಳ್ಳುವ ಗಾಡಿಯಲ್ಲಿ ಕುಳಿತಿದ್ದಳು. ಆಕೆಯ ಹಿಂದೆ ಕಟ್ಟಿದ್ದ ಒಂದು ರಟ್ಟಿನ ಮೇಲೆ ಬೇಲೂರು ಮಠದ ಚಿತ್ರವನ್ನು ಬಿಡಿಸಲಾಗಿತ್ತು. ಐದನೆಯ ತರಗತಿಯಲ್ಲಿ ಓದುತ್ತಿದ್ದ ಆರತಿ ಕಚ್ಚಪ್ ಎಂಬ ಆ ಬಾಲಕಿ ನಮಗೆಲ್ಲಾ ಪರಿಚಿತಳಾದವಳು. ಮಂದಿರದ ಮುಂದಿನ ಹುಲ್ಲುಹಾಸಿನ ಮೇಲೆ ಕುಳಿತುಕೊಳ್ಳುವಂತೆ ನಾನು ಅವಳನ್ನು ಕರೆದೆ. ಅವಳು ಗಾಡಿಯಿಂದ ಇಳಿದುಬಂದಳು. ಈಗಾಗಲೇ ಅನೇಕ ಭಕ್ತರು ಹುಲ್ಲುಹಾಸಿನ ಮೇಲೆ ಕುಳಿತಿದ್ದರು.

"ಎಷ್ಟು ಗಂಟೆಗೆ ಮನೆಯಿಂದ ಹೊರಟೆ?" ಎಂದು ನಾನು ಆರತಿಯನ್ನು ಕೇಳಿದೆ. ಅವಳು ಹೇಳಿದಳು, "ಬೆಳಗ್ಗೆ ಏಳು ಗಂಟೆಗೆ. ಅಕ್ಕಂದಿರು (ದೊಡ್ಡ ಹುಡುಗಿಯರು) ಶ್ರೀಮಾತೆಯವರಿಗೆ ಅಲಂಕರಿಸಿ, ಗಾಡಿಯಲ್ಲಿ ಕುಳಿತುಕೊಳ್ಳುವಂತೆ ಹೇಳಿದರು." ಆಗ ನಾನು ಕೇಳಿದೆ, "ಮನೆಯಿಂದ ಹೊರಡುವ ಮುನ್ನ ಏನಾದರೂ ತಿಂದೆಯಾ?" ಅದಕ್ಕೆ ಏನೂ ತಿಂದಿಲ್ಲವೆಂದು ಅವಳು ಉತ್ತರಿಸಿದಳು. ಗಾಡಿಯಲ್ಲಿ ಕುಳಿತು ಬಂದಿರುವಾಗಲೂ ಈ ಪುಟ್ಟ ಬಾಲಕಿಗೆ ಯಾವ ಉಪಾಹಾರವನ್ನೂ ಕೊಟ್ಟಿರಲಿಲ್ಲ. ಇದನ್ನು ಅರಿತ ನಾನು, ಕೂಡಲೆ ಮಂದಿರದಿಂದ ಪ್ರಸಾದವನ್ನು ತರಲು ದೊಡ್ಡ ಹುಡುಗಿಯೊಬ್ಬಳಿಗೆ ಹೇಳಿದೆ. ಅವಳು ತಂದ ಪ್ರಸಾದವನ್ನು ಆರತಿಗೆ ನೀಡಿದೆ. ಆದರೆ ಅವಳು ಅದನ್ನು ಒಡನೆಯೇ ತಿನ್ನಲಿಲ್ಲ, ಕೈಯಲ್ಲಿ ಇಟ್ಟುಕೊಂಡಿದ್ದಳು. ಇದರಿಂದ ನನಗೆ ಆಶ್ಚರ್ಯವಾಯಿತು. ನಾನು ಹೇಳಿದೆ, "ಆರತಿ, ತಿನ್ನು. ಬೆಳಗ್ಗಿನಿಂದ ನೀನು ಏನೂ ತಿಂದಿಲ್ಲವಲ್ಲಾ, ಈಗ ತಿನ್ನು."

ಅಚ್ಚರಿ ಎಂಬಂತೆ ಅವಳು ಇನ್ನೂ ತಿನ್ನಲು ನಿರಾಕರಿಸಿದಳು. ನಾನು, "ಏಕೆ ನೀನು ತಿನ್ನುವುದಿಲ್ಲ?" ಎಂದು ಮತ್ತೆ ಮತ್ತೆ ಪ್ರಶ್ನಿಸಿದೆ. ಅವಳ ಉತ್ತರ ನನಗೆ ಬಹಳ ವಿಸ್ಮಯವನ್ನು ಉಂಟುಮಾಡಿತು. "ನನ್ನ ತಾಯಿ ಏನನ್ನೂ ತಿನ್ನಬೇಡವೆಂದು ಹೇಳಿದ್ದಾಳೆ" ಎಂದು ಅವಳು ಹೇಳಿದಳು. ಅವಳ ತಾಯಿಯ ಪರಿಚಯವಿದ್ದ ಕಾರಣ, ಈ ಉತ್ತರದಿಂದ ನನಗೆ ಗರಬಡಿದಂತೆ ಆಯಿತು. ಆಕೆಯ ತಾಯಿ ಬುಡಕಟ್ಟು ಜನಾಂಗಕ್ಕೆ ಸೇರಿದವಳು, ಕಡುಬಡವಿ. ಹಡಿಯಾ ಎಂಬ ಅಕ್ಕಿಯಿಂದ ಮಾಡಿದ ಒಂದು ರೀತಿಯ ಸ್ಥಳೀಯ ಮದ್ಯವನ್ನು ತಯಾರಿಸಿ, ಮಾರುಕಟ್ಟೆಯಲ್ಲಿ ತಾನೇ ಮಾರಾಟ ಮಾಡುತ್ತಿದ್ದಳು. ಆ ಮೂಲಕ ಮೂರು ಮಕ್ಕಳಿರುವ ತನ್ನ ಕುಟುಂಬವನ್ನು ಬಹಳ ಕಷ್ಟದಿಂದ ನಿರ್ವಹಿಸುತ್ತಿದ್ದಳು. ಅವಳ ಗಂಡನೋ ಶುದ್ಧ ಅಪ್ರಯೋಜಕ ವ್ಯಕ್ತಿ.


"ಪ್ರಸಾದ ತಿನ್ನಲು ನಿನ್ನ ತಾಯಿ ಏಕೆ ಬೇಡವೆನ್ನುತ್ತಾಳೆ?" ಎಂದು ನಾನು ಆರತಿಯನ್ನು ಕೇಳಿದೆ. ಆಕೆ ಉತ್ತರಿಸಲೊಲ್ಲಳು. ನಾನು ಪುನಃ ಪುನಃ ಒತ್ತಾಯಿಸಿದೆ. ಆಗ ಅವಳು ಬಹಳ ಹಿಂಜರಿಯುತ್ತಾ ಹೀಗೆ ಹೇಳಿದಳು: "ನನ್ನ ತಾಯಿ ನನಗೆ ಹೇಳಿದ್ದಾಳೆ, 'ನೋಡು, ಆರತಿ. ಈ ದಿನ ನೀನು ಶ್ರೀಮಾತೆಯವರಂತೆ ಅಲಂಕಾರ ಮಾಡಿಕೊಂಡಿರುವೆ. ಇವತ್ತು ನೀನು ಡುಂಗ್ರಿ ಹಳ್ಳಿಯ ಜನರೆಲ್ಲಾ ಊಟ ಮಾಡಿದ ಮೇಲೆಯೇ, ಏನನ್ನಾದರೂ ಆಶ್ರಮದಲ್ಲಿ ಉಣ್ಣಬೇಕು. ಏಕೆಂದರೆ ಶ್ರೀಮಾತೆಯವರು ಭಕ್ತರೆಲ್ಲಾ ಉಂಡ ಮೇಲೆಯೇ, ಕೊನೆಯಲ್ಲಿ ಊಟ ಮಾಡುತ್ತಿದ್ದರು ತಾನೇ.' " ಅದನ್ನು ಕೇಳಿ ನನ್ನ ಕಣ್ಣುಗಳು ನೀರಿನಿಂದ ತುಂಬಿಹೋದವು.

ಗ್ರಾಮೀಣ ಮದ್ಯವನ್ನು ತಯಾರಿಸಿ, ಮಾರಾಟ ಮಾಡಿ, ಹೊಟ್ಟೆಹೊರೆದುಕೊಳ್ಳುವ ನಿರಕ್ಷರಕುಕ್ಷಿಯಾದ ಈ ಹಳ್ಳಿಯ ಮಹಿಳೆ ಎಂತಹ ಉನ್ನತ ಸಂಸ್ಕೃತಿಯನ್ನು ತನ್ನ ಈ ನಡವಳಿಕೆಯ ಮೂಲಕ ಪ್ರಕಟಿಸುತ್ತಿದ್ದಾಳೆ! ಇವಳು ಶ್ರೀಮಾತೆಯವರ ಜೀವನದಲ್ಲಿ ಕಂಡುಬರುವ ಒಂದು ಶ್ರೇಷ್ಠ ಗುಣವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದಾಳೆ. ಹಾಗೆಯೇ, ತನಗೆ ತೋಚಿದ ರೀತಿಯಲ್ಲಿ, ಶ್ರೀಮಾತೆಯವರ ಆದರ್ಶದ ಬೆಳಕಿನಲ್ಲಿ ತನ್ನ ಮಗಳ ಜೀವನವನ್ನೂ ರೂಪಿಸುವುದಕ್ಕೆ ಪ್ರಯತ್ನಿಸುತ್ತಿದ್ದಾಳೆ.

ಹೀಗೆ ಶ್ರೀಮಾತೆಯವರ ಉಪದೇಶಗಳಲ್ಲಿ ಹತ್ತರಲ್ಲಿ ಒಂದಂಶವನ್ನಾದರೂ ಜನರು ಪಾಲಿಸಲು ಯತ್ನಿಸಿದ್ದಲ್ಲಿ, ಎಂಥ ಸುಂದರ ಸಮಾಜದ ನಿರ್ಮಾಣವಾಗುತ್ತಿತ್ತು! ಹಾಗೆ ಮಾಡಲೆಂದು ಶ್ರೀಮಾತೆಯವರು ಎಲ್ಲರಿಗೂ ಸ್ಫೂರ್ತಿ ನೀಡಲಿ.

# ಭಕ್ತಿಯನ್ನು ಕುರಿತು ಸ್ವಾಮಿ ವಿವೇಕಾನಂದರು

ಜಿ.ಎಸ್. ಜಯದೇವ



ವಿವೇಕಕಿರಣ

ಸ್ವಾಮಿ ವಿವೇಕಾನಂದರು ಭಕ್ತಿಯ ಕುರಿತಾಗಿ ಅಮೇರಿಕ, ಯೂರೋಪ್ ಗಳಲ್ಲಿ ಪ್ರವಚನ ಮಾಡಿದ್ದಾರೆ. ಈ ಪ್ರವಚನಗಳಲ್ಲಿ ಭಕ್ತಿಯನ್ನು ಆಧ್ಯಾತ್ಮಿಕವಾಗಿ ಹಾಗೂ ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿದ್ದಾರೆ.

ಭಕ್ತಿಯ ಬೆಳವಣಿಗೆ ಹೇಗೆ ಮೂರ್ತರೂಪದಿಂದ ಅಮೂರ್ತಕ್ಕೆ ಏರುತ್ತದೆಂದೂ ಹಾಗೂ ಅಮೂರ್ತವು ನಿರಾಕಾರವಾಗಿದ್ದು, ಭಕ್ತನ ಭಕ್ತಿಯು ಪಕ್ವವಾದಂತೆಲ್ಲಾ ಆತ ನಾಮರೂಪಗಳಿಂದ ಮೇಲೇರಿ ಅಮೂರ್ತ ಸ್ವರೂಪದ ಭಗವಂತನನ್ನು ಹೇಗೆ ಪ್ರೀತಿಸುತ್ತಾನೆ ಎಂಬುದನ್ನೂ ಸ್ವಾಮೀಜಿ ವಿಶ್ಲೇಷಿಸುತ್ತಾರೆ. ಹಾಗಾಗಿ ದೇವರ ಕಲ್ಪನೆ ಎಲ್ಲ ಧರ್ಮಗಳಲ್ಲೂ ಒಂದಿಲ್ಲೊಂದು ರೀತಿಯಲ್ಲಿ, ನಾಮ ಅಥವಾ ರೂಪದ ಸುತ್ತ ವಿಧಿವಿಧಾನಗಳನ್ನು ರೂಪಿಸುತ್ತಾ, ಒಂದು ಕಂದಾಚಾರ ಪದ್ಧತಿಯಾಗಿ ಪ್ರಾರಂಭವಾಗುತ್ತದೆ. ಆದರೆ ಭಕ್ತನ ಮನಸ್ಸು ಪಕ್ವವಾದಂತೆ ಅವನು ಈ ಕಂದಾಚಾರಗಳಿಂದ ಬಿಡಿಸಿಕೊಳ್ಳುತ್ತಾನೆ.

ಜೈನ ಮತ್ತು ಬೌದ್ಧ ಧರ್ಮಗಳನ್ನು ಹೊರತುಪಡಿಸಿ ಪ್ರಪಂಚದ ಎಲ್ಲಾ ಧರ್ಮದಲ್ಲೂ ವೈಯಕ್ತಿಕ ದೇವರ ಕಲ್ಪನೆಯಿದೆ. ಈ ಇಷ್ಟದೈವದ ವೈವಿಧ್ಯತೆಯು ಬಹುಶಃ ಹಿಂದೂಧರ್ಮದಲ್ಲಿ ಅಗಾಧ ರೂಪ ಪಡೆದು ೩೩ ಕೋಟಿ ದೇವತೆಗಳು ನಮ್ಮಲ್ಲಿವೆ. ಇದು ಅರ್ಥ ಮಾಡಿಕೊಳ್ಳಬಹುದಾದ ಸಂಗತಿ. ಈ ವೈಯಕ್ತಿಕ ದೇವರುಗಳ ಸುತ್ತ ಬೆಳೆದುಕೊಂಡ ನಿರ್ದಿಷ್ಟ ವಿಧಿವಿಧಾನಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡು ಧರ್ಮದ ತಿರುಳಾದ ದೇವರು ಅಂಚಿಗೆ ಸರಿಯುತ್ತಾನೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ಈ ಕಾರಣದಿಂದಲೇ ಧರ್ಮ ಧರ್ಮಗಳ ನಡುವೆ ಸಂಘರ್ಷವಿದೆ ಎಂದು. ಏಕೆಂದರೆ, ಪ್ರತಿಯೊಬ್ಬನೂ ತನ್ನ ನಂಬಿಕೆಯೇ ಇತರರೆಲ್ಲರ ನಂಬಿಕೆಗಳಿಗಿಂತ ಶ್ರೇಷ್ಠವೆಂದೂ, ಪರಮಸತ್ಯವೆಂದೂ ಪ್ರತಿಪಾದಿಸುತ್ತಾನೆ. ಆ ಕಾರಣದಿಂದಾಗಿಯೇ ಯುದ್ಧ, ರಕ್ತಪಾತ, ಮತಾಂತರಗಳೆಲ್ಲವೂ ನಡೆದಿವೆ. ಪ್ರತಿಯೊಬ್ಬನೂ ತನ್ನ ಧರ್ಮವನ್ನು ಪ್ರೀತಿಸುವುದು ಹೇಗೆಂದರೆ, ಇತರ ಧರ್ಮಗಳನ್ನು ದ್ವೇಷಿಸುವ ಮುಖಾಂತರ ಮಾತ್ರ. ಈ ಸಂದರ್ಭದಲ್ಲಿ ವಿವಿಧ ಧರ್ಮಗಳ ತುಲನಾತ್ಮಕ ಅಧ್ಯಯನ ನಮಗೆ ಸಹಾಯ ಮಾಡುತ್ತದೆ. ಯಾವುದನ್ನು ನಮ್ಮ ಧರ್ಮದ ಧಾರ್ಮಿಕ ಭಾವನೆಗಳು ಎಂದು ಘೋಷಿಸುತ್ತೇವೆಯೋ ಅದೇ ಭಾವನೆಗಳನ್ನು ಇತರ ಧರ್ಮದವರೂ ಸಹ ನೂರಾರು ವರ್ಷಗಳಿಂದ ಹೊಂದಿರುವುದನ್ನು ಕಾಣಬಹುದು; ಕೆಲವೊಮ್ಮೆ ಈ ಭಾವನೆಗಳು ಹೆಚ್ಚು ವಿಕಾಸವಾಗಿರುತ್ತವೆ, ಅಷ್ಟೆ! ಇದು ಸ್ವಾಮೀಜಿಯವರು ಹೇಳುವ ಮಾತು.

ವಾಸ್ತವವಾಗಿ ನೋಡಿದರೆ 'ಭಕ್ತಿ'ಯೆಂಬುದು ಪ್ರೀತಿಯ ಒಂದು ಪ್ರತಿರೂಪ. ಪ್ರಪಂಚದಲ್ಲಿ ಎಲ್ಲರೂ ಪ್ರೀತಿಸುತ್ತಾರೆ. ಪ್ರೀತಿಸದ ಯಾರೂ ಈ ಪ್ರಪಂಚದಲ್ಲಿ ಸಿಕ್ಕುವುದಿಲ್ಲ. ಸ್ವಾಮಿ ವಿವೇಕಾನಂದರು ಇದನ್ನು ಬಹಳ ಸೊಗಸಾಗಿ ಹೇಳುತ್ತಾರೆ. ಮನುಷ್ಯ ಮನುಷ್ಯರ ನಡುವಣ ಆಕರ್ಷಣೆಗೆ, ಪುರುಷ ಸ್ತ್ರೀಯರ ನಡುವಿನ ಆಕರ್ಷಣೆಗೆ, ಪ್ರಾಣಿ ಪ್ರಾಣಿಗಳ ನಡುವಿನ ಆಕರ್ಷಣೆಗೆ ಏನು ಕಾರಣ? ಇದೇ 'ಪ್ರೀತಿ.' ಇದು ನಿರ್ಜೀವ ವಸ್ತುಗಳ ನಡುವೆಯೂ ನಡೆಯುವ ವಿದ್ಯಮಾನ. ಒಂದು ಅಣು ಮತ್ತೊಂದು ಅಣುವಿನ ಜೊತೆ ಜೋಡಣೆಯಾಗುವಂತೆ, ಆಕಾಶಕಾಯಗಳು ಒಂದನ್ನೊಂದು ಸೆಳೆಯುವಂತೆ, ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವೂ ಮತ್ತೊಂದನ್ನು ಆಕರ್ಷಿಸುವ ಈ ಗುಣವನ್ನೇ ಸ್ವಾಮಿ ವಿವೇಕಾನಂದರು 'ಪ್ರೀತಿ' ಎನ್ನುತ್ತಾರೆ.

ಈ ಪ್ರೀತಿಯೇ ಪ್ರಧಾನವಾದರೂ, ತಮ್ಮಲ್ಲಿ ಹಾಸುಹೊಕ್ಕಾಗಿರುವ ವಿಧಿವಿಧಾನಗಳು, ಆಚಾರವಿಚಾರಗಳೇ ವಿವಿಧ ಧರ್ಮಗಳಲ್ಲಿ ಮುಖ್ಯವಾಗುತ್ತವೆ. ಧರ್ಮ–ಧರ್ಮಗಳ ನಡುವೆ, ಆಕಾರ ನಿರಾಕಾರಗಳ ನಡುವೆ ದೊಡ್ಡ ಚರ್ಚೆ, ವಾದವಿವಾದಗಳು ಹುಟ್ಟಿವೆ. ನಿರಾಕಾರವೇ ಸತ್ಯ ಎಂದು ಪ್ರತಿಪಾದಿಸುವ ಇಸ್ಲಾಂ ಧರ್ಮವಾಗಲಿ, ಕ್ರೈಸ್ತಧರ್ಮವಾಗಲಿ ನಾಮರೂಪಗಳನ್ನು ಸಂಪೂರ್ಣವಾಗಿ ತೊರೆದಿಲ್ಲ. ಮಹಮದೀಯನು ನಮಾಜ್ ಮಾಡುವಾಗ ಕಾಬಾದ ದಿಕ್ಕಿನೆಡೆಗೆ ಮಾಡುತ್ತಾನೆ. ಆತನಿಗೆ ಗೋಡೆಯೇ ಮೂರ್ತರೂಪದ ಆಸರೆಯಾಗುತ್ತದೆ. ಕ್ರೈಸ್ತರ ಪೂಜಾವಿಧಾನವನ್ನು ಗಮನಿಸಿದರೆ ಅದು ಹೆಚ್ಚು ಕಡಿಮೆ ಇತರೆಲ್ಲ ಧರ್ಮಗಳಲ್ಲಿರುವ ಬಾಹ್ಯ ಪೂಜಾವಿಧಾನವನ್ನೇ ಹೋಲುತ್ತದೆ. ಮನುಷ್ಯ ನಿರಾಕಾರವನ್ನು ಪ್ರತಿಪಾದಿಸಿದರೂ

ಅವನ ಅಪಕ್ವ ಮನಸ್ಸು ಈ ಅಮೂರ್ತ ಕಲ್ಪನೆಯನ್ನು ಗ್ರಹಿಸಲಾರದು. ಮನಸ್ಸು ಪಕ್ವವಾಗುವುದು ಎಂದರೆ ಅಥವಾ ಮನಸ್ಸು ಬೆಳೆಯುವುದು ಎಂದರೆ, ಅದು ನಿಧಾನವಾಗಿ ಈ ಮೂರ್ತ ಕಲ್ಪನೆಯಿಂದ ಅಮೂರ್ತ ಕಲ್ಪನೆಯ ಕಡೆಗೆ ಬೆಳೆಯುವುದು. ಇದಕ್ಕೆ ಭಕ್ತಿ ಅಡಚಣೆಯಲ್ಲ, ಪೂರಕವಾಗಿದೆ. ಈ ಅಂಶವನ್ನು ಸ್ವಾಮೀಜಿ ವಿಶದಪಡಿಸುತ್ತಾರೆ.

ಎಲ್ಲಿಯವರೆಗೆ ಭಕ್ತಿಯು ವ್ಯಾಪಾರವಾಗುವುದೋ ಅಲ್ಲಿಯವರೆಗೆ ಭಕ್ತಿಯ ಮುಖ್ಯ ತಿರುಳಾದ ಪ್ರೀತಿ ಎಂಬುದು ಸಾಧ್ಯವಾಗುವುದೇ ಇಲ್ಲ. ಇದೊಂದು ಅಂಗಡಿ ವ್ಯಾಪಾರವಾಗುತ್ತದೆ. ಆದರೆ ಭಕ್ತನಾದವನು ಈ ಸ್ಥಿತಿಯಿಂದ ಮುಂದುವರೆದು ಮೇಲೇರಿದಾಗ, ಅವನಿಗೆ ಪ್ರೀತಿಯೊಂದೇ ಫಲವಾಗಿ ಕಾಣುವುದು. ಭಕ್ತಿ ಮತ್ತು ಜ್ಞಾನಗಳ ನಡುವೆ ಒಂದು ಮಹತ್ವವಾದ ವ್ಯತ್ಯಾಸವಿದೆ. ಭಕ್ತಿಯಲ್ಲಿ ಭಗವಂತನ ಮೇಲಿಡುವ ಪ್ರೀತಿಯೇ ದಾರಿ ಹಾಗೂ ಗುರಿ. ಇಲ್ಲಿ ಭಕ್ತಿಯಿಂದ ಪಡೆಯಬೇಕಾದ ಮತ್ತಾವ ವಸ್ತುವೂ ಇಲ್ಲ. ಭಕ್ತನಾದವನು ಜ್ಞಾನವನ್ನು ಗುರಿಯಾಗಿಟ್ಟುಕೊಂಡು, ಭಗವಂತನನ್ನು ಪ್ರೀತಿಸುವುದಿಲ್ಲ. ಆದರೂ ಈ ಪ್ರಕ್ರಿಯೆಯಲ್ಲಿ ಅವನಿಗೆ ಜ್ಞಾನ ಪ್ರಾಪ್ತವಾಗುತ್ತದೆ.

ಜ್ಞಾನಮಾರ್ಗದಲ್ಲಿ ಸಹ ಭಕ್ತಿಯ ಲಕ್ಷಣಗಳು ಕಾಣುತ್ತವೆ. ನಿರಾಕಾರ ಪ್ರತಿಪಾದಕರಾದ ಅನೇಕ ಜ್ಞಾನಿಗಳು ಭಕ್ತಿಯ ಲಕ್ಷಣವನ್ನು ತೋರಿಸುತ್ತಾರೆ. ಆದರೆ ಇವರ ಚರಮಗುರಿ ಜ್ಞಾನ; ಭಕ್ತಿ ಇವರಿಗೆ ಮಾರ್ಗ ಮಾತ್ರ. ಈ ಕಾರಣದಿಂದ ಸ್ವಾಮಿ ವಿವೇಕಾನಂದರು ಭಕ್ತಿಯೇ ಶ್ರೇಷ್ಠ ಎಂದು ಹೇಳುತ್ತಾರೆ. ಏಕೆಂದರೆ, ಪರಿಪೂರ್ಣ ಭಕ್ತಿಯಲ್ಲಿ ಭಕ್ತ ಬಯಸದೇ ಇದ್ದರೂ, ಪರಿಪೂರ್ಣ ಜ್ಞಾನ ತಾನಾಗಿಯೇ ಲಭಿಸುತ್ತದೆ.

ಸ್ವಾಮೀಜಿಯವರು ನಾಮದ ಪೂಜೆಯ ಬಗ್ಗೆ ವಿವರಿಸುತ್ತಾರೆ. ಕ್ರೈಸ್ತರ ಹಳೆ ಒಡಂಬಡಿಕೆಯಲ್ಲಿ ದೇವರ ಹೆಸರನ್ನೇ ಪೂಜಿಸುವ ವಾಡಿಕೆಯಿದೆ. ಭಗವಂತನ ನಾಮವು ಬಹಳ ಪವಿತ್ರವೆಂದು ಪರಿಗಣಿಸಲಾಗುತ್ತದೆ. ಬೈಬಲ್‌ನಲ್ಲೂ ದೇವರ ನಾಮ ಬಹಳ ಪವಿತ್ರವಾದುದೆಂದು ಹೇಳಿದೆ. ಇದು ಸ್ವಾಮಿ ವಿವೇಕಾನಂದರ ಪ್ರಕಾರ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದ ವಿಷಯ. ನಾಮವನ್ನು ಭಾವಿಸದೇ ಅದಕ್ಕೆ ಸಂಬಂಧಪಟ್ಟ ಆಕಾರವನ್ನು ಭಾವಿಸಲು ಸಾಧ್ಯವೇ ಇಲ್ಲ. ನಾಮ ಮತ್ತು ಆಕಾರಗಳು ಒಂದಕ್ಕೊಂದು ಅನ್ಯೋನ್ಯವಾಗಿ ಬೆಸೆದುಕೊಂಡಿವೆ. ಹಾಗಾಗಿ ಕಣ್ಣಿಗೆ ಕಾಣುವ ಈ ಇಡೀ ಪ್ರಪಂಚವೇ ಭಗವಂತನ ರೂಪ ಮತ್ತು ನಾಮಗಳ ಪ್ರತೀಕವಾಗಿದೆ. ಹಾಗಾಗಿ ನಾಮ ಮತ್ತು ರೂಪಗಳನ್ನು ಪ್ರತ್ಯೇಕಿಸುವುದು ಅಸಾಧ್ಯ. ಪ್ರಪಂಚದಾದ್ಯಂತ ನಾಮರೂಪಗಳನ್ನು ಜನರು ಸಹಜವಾಗಿ ಪೂಜಿಸುವುದು ನಮಗೆ ಕಾಣುತ್ತದೆ. ಜೈನ ಮತ್ತು ಬೌದ್ಧಧರ್ಮೀಯರೂ ಸಹ ತಮ್ಮ ಧರ್ಮದ ಸಂಸ್ಥಾಪಕರನ್ನು ಆರಾಧಿಸುತ್ತಾರೆ, ಪೂಜಿಸುತ್ತಾರೆ. ಹಾಗಾಗಿ ಒಂದಲ್ಲ ಒಂದು ನಾಮರೂಪ ಮನುಷ್ಯನ ಭಕ್ತಿಭಾವನೆಗೆ ಬುನಾದಿಯಾಗಿ ನಿಲ್ಲುತ್ತದೆ. ಆದರೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಚರ್ಚಿನಲ್ಲಿ ಹುಟ್ಟಿದರೂ ಅಲ್ಲಿಯೇ ಸಾಯುವುದು ಒಳ್ಳೆಯದಲ್ಲ, ಮನುಷ್ಯ ಅದರಿಂದಾಚೆಗೂ ಬೆಳೆಯಬೇಕು, ಎಂದರೆ ಮೂರ್ತದಿಂದ ಅಮೂರ್ತದೆಡೆಗೆ ಬೆಳೆಯಬೇಕು" ಎಂದು.

ಬಹುಸಂಖ್ಯಾತರು ನಿರೀಶ್ವರವಾದಿಗಳು. ನಿರೀಶ್ವರವಾದಿಗಳ ಪ್ರಾಮಾಣಿಕತೆಯನ್ನು ಮೆಚ್ಚುತ್ತಾ ಸ್ವಾಮೀಜಿ ಹೇಳುತ್ತಾರೆ, ಈ ವಸ್ತುಪ್ರಧಾನವಾದ ನಿರೀಶ್ವರವಾದಿ ನಾಸ್ತಿಕರು ಧರ್ಮದ ಪ್ರತಿಪಾದಕರಾದ ಆಸ್ತಿಕರಿಗಿಂತ ಎಷ್ಟೋ ವಾಸಿ. ಆಸ್ತಿಕರು ಧರ್ಮಕ್ಕಾಗಿ ಯುದ್ಧ ಮಾಡುತ್ತಾರೆ, ಧರ್ಮಕ್ಕಾಗಿ ರಕ್ತಪಾತ ನಡೆಸುತ್ತಾರೆ, ವಾಗ್ವಾದ ಮಾಡುತ್ತಾರೆ, ಪಾಂಡಿತ್ಯವನ್ನು ಮೆರೆಯುತ್ತಾರೆ. ಆದರೆ ಧರ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲಾರರು. ಏಕೆಂದರೆ ಅವರ ಗಮನವೆಲ್ಲಾ ಇತರರನ್ನು ಗೆಲ್ಲುವುದರ ಕಡೆಗೇ ಇರುತ್ತದೆಯೇ ಹೊರತು, ತಮ್ಮನ್ನು ತಾವು ವಿಮರ್ಶೆ ಮಾಡಿಕೊಳ್ಳುವುದರ ಕಡೆಗಿರುವುದಿಲ್ಲ.

ಈ ಸಂದರ್ಭದಲ್ಲಿ ಆತ್ಯಂತಿಕ ಸತ್ಯವನ್ನು ಕುರಿತು ನಾವು ಚರ್ಚಿಸುತ್ತಿರುವಾಗ ಒಂದು ಪ್ರಶ್ನೆ ಎದುರಾಗುತ್ತದೆ. ಈ ಸತ್ಯ ಕೇವಲ ಮನುಷ್ಯಮಾತ್ರದವನ ಊಹೆಯೆ ಅಥವಾ ಇಂತಹ ಒಂದು ಸತ್ಯ ಇರಬಹುದೆ? ಈ ಪ್ರಮುಖ ಪ್ರಶ್ನೆಯನ್ನು ಸ್ವಾಮೀಜಿಯವರು ಸಹ ಎತ್ತಿಕೊಳ್ಳುತ್ತಾರೆ. ಯಾವ ಅಮೂರ್ತ ಸತ್ಯದ ಬಗ್ಗೆ ನಾವು ಮಾತನಾಡುತ್ತಿದ್ದೇವೆಯೋ ಅದು ವಾಸ್ತವವಾಗಿ ಇರುವುದೇ? ಇದೆ ಎಂದು ಹೇಳಲು ಕಾರಣವೇನು? ಇದನ್ನು ಸ್ವಾಮೀಜಿ ಹೀಗೆ ವಿಶ್ಲೇಷಿಸುತ್ತಾರೆ. ಒಂದು ಭಾವನೆ ನಿಷ್ಕಾರಣವಾಗಿ ಹುಟ್ಟುವುದಿಲ್ಲ, ಅದಕ್ಕೆ ಸಂಬಂಧಪಟ್ಟ ವಸ್ತು ಒಂದು ಇರಲೇಬೇಕು. ಯಾವ ಭಾವನೆಗಳನ್ನು ನಾವು ಮೂಡಿಸಿಕೊಳ್ಳುತ್ತೇವೆಯೋ, ಯಾವ ಆವಶ್ಯಕತೆಯನ್ನು ನಾವು ಮನಗಾಣುತ್ತೇವೆಯೋ, ಆ ಎಲ್ಲಕ್ಕೂ ಪ್ರತಿಯಾಗಿ ವಸ್ತುವೊಂದು ಇದ್ದೇ ಇರುತ್ತವೆ. ಈ ಆನುಷಂಗಿಕ ಸಂಬಂಧಗಳನ್ನು ಸ್ವಾಮೀಜಿ ಹೀಗೆ ವಿವರಿಸುತ್ತಾರೆ: ಮನುಷ್ಯ ಉಸಿರಾಡಬೇಕೆಂದು ಬಯಸುತ್ತಾನೆ – ಹೊರಗೆ ಗಾಳಿ ಇದೆ, ಮನುಷ್ಯ ಆಹಾರ ಸೇವಿಸಬೇಕೆಂದು ಬಯಸುತ್ತಾನೆ – ಹೊರಗೆ ಆಹಾರ ಇದೆ. ಈ ಆಸೆಗಳನ್ನು ನಮ್ಮ ಮನಸ್ಸಿನಲ್ಲಿ ಹುಟ್ಟಿಸಿದ್ದು ಯಾವುದು? ಹೊರಗಿನ ವಸ್ತುಗಳು. ಹಾಗೆಯೇ ಬೆಳಕಿನ ಪ್ರಚೋದನೆಯಿಂದ ಕಣ್ಣು ಹುಟ್ಟಿಕೊಂಡಿತು, ಶಬ್ದದ ಪ್ರಚೋದನೆಯಿಂದ ಕಿವಿ ಹುಟ್ಟಿಕೊಂಡಿತು, ಮನುಷ್ಯನ ಒಳಗಿನಿಂದ ಧ್ವನಿಸುವ ಪ್ರತಿಯೊಂದು ಆಸೆಯೂ ಅದಕ್ಕೆ ತತ್ಸಮಾನವಾಗಿ ಹೊರಗೆ ಇರುವ ಒಂದು ವಸ್ತುವಿನಿಂದ ಹುಟ್ಟುತ್ತದೆ. ಹಾಗೆಯೇ ಪರಿಪೂರ್ಣತೆಯ ಆಸೆ ನಮ್ಮ ಮನಸ್ಸಿನಲ್ಲಿ ಹುಟ್ಟಿರುವುದಕ್ಕೆ ಕಾರಣ ಆ ಒಂದು ಸ್ಥಿತಿ ಇದೆ ಎಂಬುದಕ್ಕಾಗಿ. ಗುರಿಯನ್ನು ಮುಟ್ಟುವ ಈ ಆಸೆಯು ವಸ್ತುಪ್ರಪಂಚದ ಪ್ರಲೋಭನೆಗಳ ನಡುವೆಯೂ ಶಕ್ತಿಶಾಲಿಯಾಗಿ ಅನೇಕ ಸಹಸ್ರಮಾನಗಳ ಪರ್ಯಂತ ಜೀವಂತವಾಗಿ ಮನುಕುಲದ ಮನದಾಳದಲ್ಲಿ